# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 242 |
| 2 | ಸದಸ್ಯರ ಹೆಸರು | : | ಶ್ರೀ ವೈ ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15-02-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿರುವ ಹಲವು ಸಣ್ಣ ಸಣ್ಣ ಉದ್ಯಾನವನಗಳಲ್ಲಿ ಬಿದಿರುಗಳನ್ನು ಬೆಳಸುತ್ತಿದ್ದು ಇವುಗಳನ್ನು ಬೆಳೆದ ನಂತರ ಏನು ಮಾಡಲಾಗುತ್ತಿದೆ; ಮಾಹಿತಿ ನೀಡುವುದು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ 08 ವಲಯಗಳ ಪೈಕಿ ಕೆಲವು ಉದ್ಯಾನವನಗಳಲ್ಲಿ ಮಾತ್ರ ಬಿದಿರನ್ನು ಅಲಂಕಾರಿಕ ದೃಷ್ಟಿಯಿಂದ ನಿರ್ವಹಿಸಲಾಗುತ್ತಿದೆ. ಈ ಬಿದಿರು ತಳಿಯ ಗಿಡವನ್ನು ಪಾಲಿಕೆಯ ಉದ್ಯಾನವನಗಳಲ್ಲಿ ಅಲಂಕಾರಿಕ ಮತ್ತು ಸೌಂದರೀಕರಣಕ್ಕಾಗಿ (Aesthetic Purpose) ಬೆಳೆಸಿ ನಿರ್ವಹಿಸಲಾಗುತ್ತಿದೆ. ಆದರೆ, ಈ ಬಿದಿರನ್ನು ದೊಡ್ಡದಾಗಿ ಬೆಳೆಸಿ ಮಾರಾಟ ಮಾಡಲಿಕ್ಕಾಗಲಿ ಅಥವಾ ಕಡಿದು ಬಿದಿರು ಕಲಾಕುಶಲಿಗಳಿಗೆ ಮೂಲ ವಸ್ತುವನ್ನಾಗಿ ನೀಡಲು ಅಭಿವೃದ್ಧಿಪಡಿಸಲಾಗುತ್ತಿಲ್ಲ ಹಾಗೂ ಈ ತಳಿಯೂ ಕಲಾಕುಶಲಿಗಳಿಗೆ ಸೂಕ್ತವಾದ ತಳಿಯಾಗಿರುವುದಿಲ್ಲ. |
| ಆ | ಈ ಉದ್ಯಾನವನಗಳಲ್ಲಿ ಬೆಳೆದ ಬಿದಿರುಗಳನ್ನು ಒಣಗಲು ಬಿಡದೆ ಕಾಲ ಕಾಲಕ್ಕೆ ಕಡಿದು ಸಣ್ಣ ಬಿದಿರು ವ್ಯಾಪಾರಿಗಳಿಗೆ ನೀಡಲು ಇಲಾಖೆಯ ತೀರ್ಮಾನಗಳೇನು; (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ |
| ಇ | ಬಿದಿರುಗಳನ್ನು ಕಾಲ ಕಾಲಕ್ಕೆ ಕಡಿದು ಮಾರಾಟ ಮಾಡಿದ್ದಲ್ಲಿ ಉದ್ಯಾನವನಗಳಲ್ಲಿನ ಇತರೆ ಗಿಡ ಮರಗಳು ಉತ್ತಮವಾಗಿ ಬೆಳೆದು ಉದ್ಯಾನವನಗಳು ಸುಂದರವಾಗಿ ಕಾಣಬಲ್ಲವು ಹಾಗೂ ಈ ರೀತಿಯಲ್ಲಿ ಬಿದಿರನ್ನು ಕಡಿದು ಬಿದಿರು ಕಲಾಕುಶಲಿಗಳಿಗೆ ಮೂಲ ವಸ್ತುವನ್ನು ನೀಡುವ ಮೂಲಕ ಉತ್ತೇಜನ ನೀಡಿದಂತಾಗುವುದಿಲ್ಲವೆ; ಇದಕ್ಕೆ ಇಲಾಖೆಯ ತೀರ್ಮಾನಗಳೇನು? (ಮಾಹಿತಿ ನೀಡುವುದು) | |

ಸಂಖ್ಯೆ: ನಅಇ 48 ಬಿಬಿಎಸ್ 2024(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ